ದಿನಾಂಕ 15-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಕು. ಎ.ಎಸ್., ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಮೀನುಗಾರಿಕಾ ಇಲಾಖೆಯವರು ಬೋಟ್ ಅಪಘಾತದ ಬಗ್ಗೆ ತಯಾರಿಸಿದ ಪ್ರಥಮ ಮಾಹಿತಿ ವರದಿಯ ನೋಟರಿ ಪ್ರತಿ, |
| ನಿಪಿ-2 | ಅಪಘಾತದ ಕುರಿತು ಪೊಲೀಸರು ತಯಾರಿಸಿದ ಯು.ಡಿ.ಆರ್., ನ ದೃಢೀಕೃತ ನಕಲು, |
| ನಿಪಿ-3 | ನನ್ನ ಗಂಡನ ಮರಣ ಪ್ರಮಾಣ ಪತ್ರ, |
| ನಿಪಿ-4 | ನಮ್ಮ ವಕೀಲರ ಮೂಲಕ 1ನೇ ಎದುರುದಾರನಿಗೆ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿ, |
| ನಿಪಿ-5 | ವಾಪಾಸು ಬಂದ ಮುಚ್ಚಿರುವ ಅಂಚೆ ಲಕೋಟೆ,<br>ಸದರಿ ಲಕೋಟೆಯನ್ನು ಒಡೆದು ತೆರೆದು ನೋಡಲಾಗಿ, ಅದರ ಒಳಗೆ ಇದ್ದ ನೋಟೀಸಿನ ಪ್ರತಿಯನ್ನು **ನಿಪಿ.5 ಎ** ಎಂದು ಗುರುತಿಸಲಾಯಿತು.<br>ವಾಪಾಸು ಬಂದ ಅಂಚೆ ಸ್ವೀಕೃತಿ **ನಿಪಿ.5 ಬಿ**. |

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.